# ನಿಮ್ಮೊಡನೆ

# ಪೊಲೀಸ್ ವ್ಯವಸ್ಥೆ ಸುಧಾರಣೆಯಾಗಲಿ

ಯಾವ ಕ್ಷಣದಲ್ಲಿ ಏನಾದೀತೋ ಎಂಬ ಆತಂಕದಲ್ಲೇ ನಗರಗಳ ಜನರು ಬದುಕುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೆಳಹಂತದ ಪೊಲೀಸರಿಂದ ಹಿಡಿದು ಉನ್ನತ ಅಧಿಕಾರಿಗಳವರೆಗೆ ಇಡೀ ಇಲಾಖೆ ದಕ್ಷತೆಯಿಂದ ಕಾರ್ಯನಿರ್ವಹಿಸುತ್ತ ಸಮಾಜದ ನೆಮ್ಮದಿ ಕಾಪಾಡಬೇಕು ಎಂಬುದು ಜನರ ನಿರೀಕ್ಷೆ. ಆದರೆ ಕರ್ತವ್ಯ ನಿರ್ವಹಣೆಯಲ್ಲಿ ಪೊಲೀಸ್ ಅಧಿಕಾರಿಗಳು ವಿಫಲರಾದ ಪ್ರಕರಣಗಳು ಬೆಳಕಿಗೆ ಬಂದಾಗಲೆಲ್ಲ ಜನರು ಪೊಲೀಸ್ ವ್ಯವಸ್ಥೆಯನ್ನು ಸಂಶಯದಿಂದ ನೋಡುತ್ತಾರೆ.



ಕೆಳ ಹಂತದ ಕೆಲವು ಪೊಲೀಸ್ ಅಧಿಕಾರಿಗಳು (ಇನ್ಸ್‌ಪೆಕ್ಟರ್ ಮತ್ತು ಸಬ್‌ಇನ್ಸ್‌ಪೆಕ್ಟರುಗಳು) ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿ ಇಲಾಖೆಯ ಶಿಸ್ತು ಕ್ರಮಗಳನ್ನು ಎದುರಿಸುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ಇಂತಹ ಪ್ರಕರಣಗಳು ಮಹಾನಗರಗಳಲ್ಲೇ ಹೆಚ್ಚು. ದೈನಂದಿನ ಕರ್ತವ್ಯ ನಿರ್ವಹಣೆಯಲ್ಲಿ ಪದೇ ಪದೇ ವಿಫಲತೆ, ಬೇಜವಾಬ್ದಾರಿತನದ ನಡವಳಿಕೆ ಮತ್ತು ಅಪರಾಧಿಗಳನ್ನು ರಕ್ಷಿಸುತ್ತ, ಅನ್ಯಾಯಕ್ಕೆ ಒಳಗಾದ ಅಸಹಾಯಕರನ್ನು ಉಪೇಕ್ಷಿಸುವ ಪೊಲೀಸ್ ಅಧಿಕಾರಿಗಳ ಸಂಖ್ಯೆ ನಗರ ಪ್ರದೇಶಗಳಲ್ಲಿ ಹೆಚ್ಚಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿರುವ ಅಧಿಕಾರಿಗಳೆಲ್ಲ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಾರೆ ಎಂದೇನೂ ಅಲ್ಲ. ಒಟ್ಟಾರೆ ಕೆಲವೇ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಗಳಿಂದ ಸಾರ್ವಜನಿಕರು ಪೊಲೀಸ್ ವ್ಯವಸ್ಥೆಯ ಮೇಲೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಈ ಬೆಳವಣಿಗೆ ಅತ್ಯಂತ ದುರದೃಷ್ಟಕರ.

ಮಹಾನಗರಗಳಲ್ಲಿ ಅಪರಾಧ ಪ್ರವೃತ್ತಿ ಹೆಚ್ಚುತ್ತಿದೆ. ಕಳ್ಳತನ, ಮೋಸ, ವಂಚನೆಯಂತಹ ಸಾಮಾನ್ಯ ಪ್ರಕರಣಗಳಿಂದ ಹಿಡಿದು ಹಗಲು ದರೋಡೆ, ಕೊಲೆಗಳಂತಹ ಹೀನ ಅಪರಾಧಗಳು ನಿತ್ಯ ನಡೆಯುತ್ತಲೇ ಇವೆ. ಇಷ್ಟು ಸಾಲದು ಎಂಬಂತೆ ವಿದೇಶಿ ಮೂಲದ ಭಯೋತ್ಪಾದಕರು ಬಾಂಬ್‌ಗಳನ್ನು ಸ್ಫೋಟಿಸುತ್ತ ಭಯದ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ. ಯಾವ ಕ್ಷಣದಲ್ಲಿ ಏನಾದೀತೋ ಎಂಬ ಆತಂಕದಲ್ಲೇ ನಗರಗಳ ಜನರು ಬದುಕುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೆಳ ಹಂತದ ಪೊಲೀಸರಿಂದ ಹಿಡಿದು ಉನ್ನತ ಅಧಿಕಾರಿಗಳವರೆಗೆ ಇಡೀ ಇಲಾಖೆ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತ ಸಮಾಜದ ನೆಮ್ಮದಿ ಕಾಪಾಡಬೇಕು ಎಂಬುದು ಜನರ ನಿರೀಕ್ಷೆ. ಆದರೆ ಕರ್ತವ್ಯ ನಿರ್ವಹಣೆಯಲ್ಲಿ ಪೊಲೀಸ್ ಅಧಿಕಾರಿಗಳು ವಿಫಲರಾದ ಪ್ರಕರಣಗಳು ಬೆಳಕಿಗೆ ಬಂದಾಗಲೆಲ್ಲ ಜನರು ಪೊಲೀಸ್ ವ್ಯವಸ್ಥೆಯನ್ನು ಸಂಶಯದಿಂದ ನೋಡುತ್ತಾರೆ. ಬೇಲಿಯೇ ಎದ್ದು ಹೊಲ ಮೇಯುತ್ತಿದೆ ಎಂಬ ಭಾವನೆ ಅವರಲ್ಲಿ ಹೆಚ್ಚುತ್ತಲೇ ಹೋಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ.

ಇತ್ತೀಚಿನ ವರ್ಷಗಳಲ್ಲಿ ಮಹಾನಗರಗಳು ಹಾಗೂ ಪಟ್ಟಣ ಪ್ರದೇಶಗಳಲ್ಲಿ ಅಪರಾಧಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದೆ. ಹೊಸ ಬಗೆಯ ಅಪರಾಧಗಳು ಬೆಳಕಿಗೆ ಬರುತ್ತಿವೆ. ಇವನ್ನೆಲ್ಲ ನಿಯಂತ್ರಿಸಬೇಕಾದ ಪೊಲೀಸರ ಕಾರ್ಯ ನಿರ್ವಹಣೆಯಲ್ಲೂ ಗುಣಾತ್ಮಕ ಬದಲಾವಣೆ ಆಗಬೇಕು. ದುರದೃಷ್ಟದ ಸಂಗತಿ ಎಂದರೆ ಪೊಲೀಸರ ದೈನಂದಿನ ಕಾರ್ಯ ನಿರ್ವಹಣೆಯಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಹೆಚ್ಚಾಗುತ್ತಿದೆ. ಹಣ, ಜಾತಿ ಇತ್ಯಾದಿಗಳ ಪ್ರಭಾವವೂ ಸೇರಿಕೊಂಡು ಭ್ರಷ್ಟ ಹಾಗೂ ದುಷ್ಟ ಅಧಿಕಾರಿಗಳಿಗೆ ಉತ್ತೇಜನ ಸಿಗುತ್ತಿದೆ. ಅಕ್ರಮವಾಗಿ ಅಪಾರ ಹಣ ಸಂಪಾದನೆ ಮಾಡಿದ ಅಧಿಕಾರಿಗಳು ಸಿಕ್ಕಿಬಿದ್ದರೂ ಅವರ ವಿರುದ್ಧ ಕ್ರಮ ಜರುಗಿಸಲು ಆಗದ ಅಸಹಾಯಕ ಪರಿಸ್ಥಿತಿಯಲ್ಲಿ ಸರ್ಕಾರ ಇದೆ. ಭ್ರಷ್ಟರು ರಾಜಕೀಯ ಪ್ರಭಾವ ಬಳಸಿಕೊಂಡು ಆಯಕಟ್ಟಿನ ಹುದ್ದೆಗಳಲ್ಲಿ ಕುಳಿತು ರಾಜಕಾರಣಿಗಳನ್ನು ಓಲೈಸುತ್ತ ತಮ್ಮ ಕರ್ತವ್ಯ ಮರೆತಿದ್ದಾರೆ. ಪೊಲೀಸ್ ಅಧಿಕಾರಿಗಳ ವರ್ಗಾವಣೆ ಅಧಿಕಾರದಲ್ಲಿರುವ ರಾಜಕಾರಣಿಗಳಿಗೆ ಅನಾಯಾಸವಾಗಿ ಹಣ ತರುವ ದಂಧೆಯಾಗಿದೆ. ಕೆಲವರು ತಮ್ಮ ಜಾತಿಯ ಅಧಿಕಾರಿಗಳನ್ನು ಬಳಸಿಕೊಂಡು ಕಾನೂನುಬಾಹಿರ ಕೃತ್ಯಗಳನ್ನು ಮಾಡುತ್ತಿದ್ದಾರೆ. ಇದೊಂದು ವಿಷವರ್ತುಲ. ಜಿಲ್ಲಾ ಎಸ್.ಪಿ.ಯೊಬ್ಬರ ವರ್ಗಾವಣೆ ಪ್ರಕರಣ ಸರ್ಕಾರವನ್ನೇ ಅಲ್ಲಾಡಿಸುವಂತಹ ರಾಜಕೀಯ ಬೆಳವಣಿಗೆ ಕಾರಣವಾದ ಇತ್ತೀಚಿನ ಪ್ರಕರಣ ಗಮನಿಸಿದರೆ ರಾಜಕಾರಣಿಗಳಿಗೆ ಪೊಲೀಸ್ ಅಧಿಕಾರಿಗಳ ಅಗತ್ಯ ಎಷ್ಟು ಮುಖ್ಯ ಎಂಬುದು ಅರ್ಥವಾದೀತು.

ಪೊಲೀಸ್ ವ್ಯವಸ್ಥೆಯಲ್ಲಿರುವ ಅಧಿಕಾರಿಗಳೆಲ್ಲರೂ ಅದಕ್ಷರು, ಅಪ್ರಮಾಣಿಕರು ಎನ್ನುವಂತಿಲ್ಲ. ಯಾವುದೇ ಆಮಿಷಗಳಿಗೆ ಒಳಗಾಗದೆ ಶ್ರದ್ಧೆಯಿಂದ ಕಾರ್ಯ ನಿರ್ವಹಿಸುವ ಅಧಿಕಾರಿಗಳೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಅಂತಹ ಅಧಿಕಾರಿಗಳಿಗೆ ಬೆಂಬಲ ಸಿಗುವುದಿಲ್ಲ. ಅಂಥವರು ಪದೇ ಪದೇ ವರ್ಗಾವಣೆಯ ಶಿಕ್ಷೆಗೆ ಒಳಗಾಗುತ್ತ ಕೆಲಸ ಮಾಡುವ ಆಸಕ್ತಿಯನ್ನೇ ಕಳೆದುಕೊಂಡು ಮೂಲೆ ಗುಂಪಾಗುತ್ತಾರೆ. ಈ ಎಲ್ಲ ಬೆಳವಣಿಗೆಗಳಿಂದ ಪೊಲೀಸ್ ಇಲಾಖೆ ದಕ್ಷತೆ ಕಡಿಮೆಯಾಗುತ್ತಿದೆ ಎಂಬ ಭಾವನೆ ಬೆಳೆಯಲು ಕಾರಣವಾಗಿದೆ.

ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ಅಧಿಕಾರಿಗಳ ಮೇಲೆ ಯಾವುದೇ ಶಿಸ್ತು ಕ್ರಮದ ಹೆಸರಿನಲ್ಲಿ ಅಮಾನತ್ತು ಮಾಡುವ ಪ್ರಕ್ರಿಯೆ ಸಾರ್ವಜನಿಕರ ಕಣ್ಣೊರೆಸುವ ಕ್ರಮ ಎನ್ನುವಂತಾಗಬಾರದು. ಭ್ರಷ್ಟ ಅಧಿಕಾರಿಗಳಿಗೆ ಶಿಕ್ಷೆ, ಪ್ರಾಮಾಣಿಕರಿಗೆ ರಕ್ಷಣೆ ಎನ್ನುವಂತಹ ಪರಿಸ್ಥಿತಿ ಪೊಲೀಸ್ ಇಲಾಖೆಯಲ್ಲಿ ನಿರ್ಮಾಣ ಆಗಬೇಕು. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ಅಮೂಲಾಗ್ರವಾಗಿ ಬದಲಾಗಬೇಕು. ಸಾರ್ವಜನಿಕ ಹಿತರಕ್ಷಣೆಯೇ ನಮ್ಮ ಅಂತಿಮ ಗುರಿ ಎಂಬಂತೆ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಈಗ ಬೇಕಾಗಿದ್ದಾರೆ.

■ ಪ್ರೇಮಕುಮಾರ ಹರಿಯಬ್ಬೆ